ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

## ಭಾರತದ ಭವಿಷ್ಯದ ಅಡಿಪಾಯ–ಅದುವೇ ನನ್ನ ಸಂವಿಧಾನ

ಕೊಳ್ಳೇಗಾಲ: 28.11.2025 ರಂದು ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲದಲ್ಲಿ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ **"ಸಂವಿಧಾನ ದಿನ"** ವನ್ನು ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ ಡಾ.ಮಹೇಶ್ ಬಿ.ಪಿ, ಪ್ರಾಂಶುಪಾಲರು, ಶಾರದ ವಿಲಾಸ ಕಾನೂನು ಕಾಲೇಜು, ಮೈಸೂರು ಇವರು ಮಾತನಾಡಿ "ಭಾರತೀಯರಲ್ಲಿ ಒಗ್ಗಟ್ಟಿನ ಮನೋಭಾವ ಮೂಡಿದರೆ ಅವರಲ್ಲಿ ಸ್ವಾತಂತ್ರರಾಗಬೇಕು ಎಂಬ ಆಲೋಚನೆ ಸಹಜವಾಗಿ ಮೂಡುತ್ತದೆ". ಆ ಹಿನ್ನೆಲೆಯಲ್ಲಿ ಭಾರತಕ್ಕೆ ಒಂದು ಗ್ರಂಥ ಅಗತ್ಯವಿದೆ ಎಂದು ಯೋಚಿಸಿ ಹಲವಾರು ಮಹಾನ್ ನಾಯಕರುಗಳ ಪರಿಶ್ರಮದ ಫಲವಾಗಿ ಪ್ರಸ್ತುತ ಭಾರತದ ಸಂವಿಧಾನ ಅಸ್ತಿತ್ವದಲ್ಲಿದೆ. ಅನುಚ್ಛೇದ 21ರಲ್ಲಿ ಜೀವಿಸುವ ಹಕ್ಕನ್ನು ನಮ್ಮ ಸಂವಿಧಾನ ನೀಡಿದೆ. " ವಸುದೈವ ಕುಟುಂಬಕಂ" ಎಂಬ ಭಾವನೆಯಿಂದಿರುವ ಭಾರತದಲ್ಲಿ ನಮ್ಮ ಸಂವಿಧಾನವು ರಾಷ್ಟ್ರವೇ ಒಂದು ಕುಟುಂಬ ಎಂಬ ಉದ್ದೇಶವನ್ನು" ಭಾರತದ ಜನತೆಯಾದ ನಾವು ಎಂಬುದರಲ್ಲಿ ಪ್ರತಿಪಾದಿಸಿದೆ. ಯಾವುದೇ ಧರ್ಮವು ನಮ್ಮ ದೇಶವನ್ನು ಮುನ್ನಡೆಸುತ್ತಿಲ್ಲ. ನಮ್ಮದು ಧರ್ಮನಿರಾಪೇಕ್ಷ ರಾಷ್ಟ್ರ. ಎಲ್ಲಾ ಧರ್ಮದಲ್ಲಿರುವ ಒಳ್ಳೆಯ ವಿಚಾರಗಳು ನಮ್ಮನ್ನು, ನಮ್ಮ ದೇಶವನ್ನು ಮುನ್ನಡೆಸುತ್ತದೆ, ನನ್ನ ದೇಶದ ಸಂವಿಧಾನವು ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳಿಗೆ ಸಂವಿಧಾನವು ಸಮಾನತೆಯನ್ನು ಪ್ರತಿಪಾದಿಸಿದೆ. ಸಂವಿಧಾನದ ರಕ್ಷಕನಾಗಿರುವ ಸರ್ವೋಚ್ಚ ನ್ಯಾಯಾಲಯ 32 / 226ರಲ್ಲಿ ನೇರವಾಗಿ ದೂರು ನೀಡಬಹುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ.ಹೆಚ್ ಎಸ್ ಕೊಂಗಳಪ್ಪರವರು ಮಾತನಾಡಿ "ಕಾನೂನು ಅರಿವು ಪ್ರತಿಯೊಬ್ಬರಿಗೂ ಮುಖ್ಯ ಪ್ರತಿಯೋಬ್ಬರಿಗೂ ಐಚಿತಿ & ಐಚಿಟಿಡಾಚಿಡಜ ತುಂಬಾ ಅತ್ಯಗತ್ಯ. 26 ನವೆಂಬರ್ 1949ರಂದು ನಮ್ಮ ಸಂವಿಧಾನವನ್ನು ಅಂಗೀಕರಿಸಲಾಯಿತು. ಭಾರತಕ್ಕೆ ದೊಡ್ಡ ಬಲ ನಮ್ಮ ಸಂವಿಧಾನ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ.ಕೆ.ಆರ್ ಗುರುಪ್ರಸಾದ್ & ಅಧ್ಯಾಪಕರುಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಡಾ.ಮಹೇಶ್ ಬಿ.ಪಿ, ಪ್ರಾಂಶುಪಾಲರು, ಶಾರದ ವಿಲಾಸ ಕಾನೂನು ಕಾಲೇಜು, ಮೈಸೂರು ಇವರು **"ಸಂವಿಧಾನ ದಿನ"** ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಪ್ರಾಚಾರ್ಯರಾದ ಡಾ.ಹೆಚ್ ಎಸ್ ಕೊಂಗಳಪ್ಪರವರು ಹಾಗೂ ರಾಜ್ಯಶಾಸ್ತ್ರ ಮುಖ್ಯಸ್ಥರಾದ ಶ್ರೀ ಕೆ ಆರ್ ಗುರುಪ್ರಸಾದ್‌ರವರನ್ನು ಕಾಣಬಹುದು.




ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಭಾರತ ಸಂವಿಧಾನದ ಪ್ರಸ್ತಾವನೆಯನ್ನು ವಾಚಿಸುತ್ತಿರುವುದು.

